ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೧೩ನೇ ಜೂನ್ ೧೯೯೦, ಜ್ಯೇಷ್ಠ ೨೩, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಸದಸ್ಯರಿಗೆ ಹುಟ್ಟುಹಬ್ಬದ ಶುಭಾಶಯಗಳು

ಅಧ್ಯಕ್ಷರು.—ಇವತ್ತು ಶ್ರೀ ಎನ್. ಚಿಕ್ಕೇಗೌಡರ ಜನ್ಮದಿನ. ತಮ್ಮೆಲ್ಲರ ಪರವಾಗಿ ನಮ್ಮ ಹಾರ್ದಿಕ ಶುಭಾಶಯಗಳನ್ನು ಅವರಿಗೆ ಅರ್ಪಿಸುತ್ತೇನೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಖಿಕ ಉತ್ತರಗಳು

ಸೇಡಂ ತಾಲ್ಲೂಕಿನ ಗ್ರಾಮಗಳಿಗೆ ಕೊಳವೆ ಬಾವಿಗಳ ಮಂಜೂರಾತಿ

೪೬೪. ಶ್ರೀ ಬಸವಂತರೆಡ್ಡಿ ಪೋತಕಪಲ್ಲಿ (ಸೇಡಂ) — ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲಾ ಪರಿಷತ್ ಮುಖ್ಯಾಂತರ ಸೇಡಂ ತಾಲ್ಲೂಕಿಗೆ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಿಗಾಗಿ ಮಂಜೂರಾದ ಕೊಳವೆ ಬಾವಿಗಳೆಷ್ಟು?

ಆ) ಕೊಳವೆ ಬಾವಿಗಳು ಮಂಜೂರಾಗಿದ್ದರೆ ಮಂಜೂರಾದ ಹಣ ಬಿಡುಗಡೆ ಮಾಡಿದ ದಿನಾಂಕ ಯಾವುದು;

ಇ) ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದ ಗ್ರಾಮಗಳಲ್ಲಿ ಏಪ್ರಿಲ್ ಕೊನೆಯ ವರೆಗೆ ತೋಡಿದ ಕೊಳವೆ ಬಾವಿಗಳೆಷ್ಟು; ಆ ಗ್ರಾಮಗಳ ಹೆಸರುಗಳ ವಿವರ ನೀಡುವುದೇ:

ಈ) ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ತೊಂದರೆಯನ್ನು ಅನುಸರಿಸಿ ಮಂಜೂರು ಮಾಡಿದ ಕೊಳವೆ ಬಾವಿಗಳನ್ನು ತೋಡದೆ ಇದ್ದರೆ ಇದರ ಹೊಣೆಗಾರರು ಯಾರು:

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಮತ್ತು ಪ್ರಚಾರ ಮಂತ್ರಿಗಳು).—

ಅ) ೫

ಆ) ೧೯೯೦ ಮೇ ತಿಂಗಳಿನಲ್ಲಿ ರೂ. ೧.೪೦ ಲಕ್ಷ ಬಿಡುಗಡೆಯಾಗಿದೆ.

ಇ) ೧೯೯೦ ಏಪ್ರಿಲ್ ತಿಂಗಳಿನ ಕಡೆಯವರೆಗೆ ಒಂದು ಕೊಳವೆ ಬಾವಿಯನ್ನೂ ಕೊರೆದಿಲ್ಲ.

ಈ) ಸಮಸ್ಯಾತ್ಮಕ ಹಳ್ಳಿಗಳನ್ನು ಗುರುತಿಸುವ ಕೆಲಸ ಕಾರ್ಯಗತದಲ್ಲಿದೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ.— ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ೫ ಎಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಆದರೆ ಒಂದೂ ಕೊಳವೆ ಬಾವಿಯನ್ನು ಸಹ ಕೊರೆದಿಲ್ಲ. ನಾನು ಜಿಲ್ಲಾ ಪರಿಷತ್ತಿನ ಸದಸ್ಯನಾಗಿದ್ದಾಗಲೂ ಸಹ ಈ ಸಮಸ್ಯಾತ್ಮಕ ಗ್ರಾಮಗಳ ಸಮಸ್ಯೆಯನ್ನು ೧೯೯೨ನೇ ಸಾಲಿನಿಂದಲೂ ಸಹ ನಾನು ಜಿಲ್ಲಾ ಪರಿಷತ್ತು ಸಭೆ ಗಮನಕ್ಕೆ ತಂದಿದ್ದೇನೆ. ಕೊಲಮಾಮಿಡಿ, ಪಾಕಾಲ್ ಹೊಸಳ್ಳಿ ತೆಲಕನೂರು ಮುಂತಾದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ತೀವ್ರವಾಗಿದೆ. ಈ ಗ್ರಾಮಗಳಿಗೆ ವಾಹನಗಳ ಮುಂಖಾಂತರ ನೀರು ಸರಬರಾಜು ಮಾಡಲು ಕೋರಲಾಗಿತ್ತು. ಇದರ ಬಗ್ಗೆ ನಾನು ಪತ್ರ ವ್ಯವಹಾರ ಸಹ ಮಾಡಿದ್ದೇವೆ. ಆದರೂ ಸಹ ಒಂದೂ ಕೊಳವೆ ಬಾವಿಯನ್ನು ಸಹ ಕೊರೆದಿಲ್ಲ.

ಅಧ್ಯಕ್ಷರು.— ತಾವು ಪ್ರಶ್ನೆ ಕೇಳಿ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ.— ಏತಕ್ಕೆ ಕೊರೆಸಿಲ್ಲ. ಇನ್ನು ಎರಡನೆಯದಾಗಿ.

ಅಧ್ಯಕ್ಷರು.— ಅದಕ್ಕೆ ಉತ್ತರ ಬಂದ ಮೇಲೆ ಎರಡನೆಯ ಪ್ರಶ್ನೆ ಕೇಳಿ.

ಶ್ರೀ ಎಂ. ವೈ. ಘೋರ್ಪಡೆ.— ಅವರು ಪ್ರಶ್ನೆ ಕೇಳಿ ಬಿಡಲಿ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ.— ಸೇಡಂ ತಾಲ್ಲೂಕಿನ ಸಂಕನೂರು ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್ ಚಿತಾಪುರ ಇವರು ದಿನಾಂಕ ೨೮-೭-೯೯ ರಂದು ಒಂದು ವರದಿಯನ್ನು ಸರ್ಕಾರಕ್ಕೆ ವಿವರವಾಗಿ ಸಲ್ಲಿಸಿದ್ದಾರೆ. ಅಲ್ಲಿ ಕುಡಿಯುವ ನೀರಿನ ತೊಂದರೆ ಏನು ಇದೆ ಅದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳ ಮತ್ತು ಸಂಬಂಧಪಟ್ಟ ಇಲಾಖಾ ಮಂತ್ರಿಗಳ ಗಮನಕ್ಕೆ ತರಲಾಗಿದೆ ಎಂದು ಜಿಲ್ಲಾ ಪರಿಷತ್ತ ಇಂಜನಿಯರಿಂಗ್ ವಿಭಾಗ ವರದಿಯನ್ನು ಸಹ ಕಳುಹಿಸಿದ್ದಾರೆ. ನನ್ನ ಹತ್ತಿರ ವರದಿ ಇದೆ. ಇದುವರೆವಿಗೂ ಕುಡಿಯುವ ನೀರಿನ ವ್ಯವಸ್ಥೆ ಏತಕ್ಕೆ ಮಾಡಿಲ್ಲ?

ಶ್ರೀ ಎಂ. ವೈ. ಘೋರ್ಪಡೆ.— ಮಾನ್ಯ ಅಧ್ಯಕ್ಷರೇ, ಸೇಡಂ ತಾಲ್ಲೂಕಿನಲ್ಲಿ ಹಣ ಕೊಟ್ಟರೂ ಬೋರ್‌ವೆಲ್‌ಗಳನ್ನು ಕೊರೆದಿಲ್ಲ ಎನ್ನುವ ವಿಚಾರ ನಿಜವಾದ ಸಂಗತಿ. ಸ್ಕೇರ್‌ಸಿಟಿ ರಿಲೀಫ್ ವರ್ಕ್ಸ್ ಕೆಳಗೆ ೧.೪೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ನ್ಯಾಯವಾಗಿ ನೋಡಿದರೆ ಇನ್ನು ಕನಿಷ್ಟ ೫ ಬೋರ್‌ವೆಲ್‌ಗಳನ್ನು ಮಾಡಬೇಕಾಗಿತ್ತು, ಆ ಜಾಗದಲ್ಲಿ ರಿಗ್‌ಗಳ ಅಭಾವ ಇಲ್ಲ. ಆ ಜಿಲ್ಲೆಯಲ್ಲಿ ೫ ರಿಗ್‌ಗಳು ಕೆಲಸ ಮಾಡುತ್ತಿವೆ. ಸೇಡಂ ತಾಲ್ಲೂಕಿನಲ್ಲಿ ಒಂದು ರಿಗ್ ಇದೆ ಆ ರಿಗ್ ಉಪಯೋಗಿಸಿ ಒಂದು ಬೋರ್‌ವೆಲ್ ಸಹ ತೆಗೆಸಿಲ್ಲ. ಇದರ ಬಗ್ಗೆ ಅಲ್ಲಿ ಏತಕ್ಕೆ ಕೆಲಸ ಮಾಡಿಲ್ಲವೆಂದು ನಾವು ಮುಂಖ್ಯ ಕಾರ್ಯದರ್ಶಿಯವರಿಂದ ಒಂದು ರಿಪೋರ್ಟ್ ತರಿಸಿದ್ದೇವೆ. ಮಾನ್ಯ ಸದಸ್ಯರಿಗೆ ಬಹುಶಃ ಈ ವಿಷಯ ಗೊತ್ತಿಲ್ಲ. ಈ ೫ ಬೋರ್‌ವೆಲ್‌ಗಳು ಅಲ್ಲದೆ ಇಲ್ಲಿ ಇನ್ನೂ ೨೫ ಬೋರ್‌ವೆಲ್‌ಗಳನ್ನು ಮಾಡಲಿಕ್ಕೆ ಸಾಧ್ಯತೆ ಇದೆ. ಅಷ್ಟು ಹಣ ನಾವು ಕಳುಹಿಸಿದ್ದೇವೆ. ಕೊಳವೆ ಬಾವಿಗಳಿಗೆ ಆ ಜಿಲ್ಲೆಗೆ ೨೫ಕ್ಕೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರಲ್ಲಿ ೧೦ ಪರ್ಸೆಂಟ್ ಇದಕ್ಕೆ ಉಪಯೋಗಿಸಿ ಕೊಂಡರೂ ೧೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಕೊಳ್ಳಬಹುದು. ಜನರಲ್ ಫಂಡ್‌ನಲ್ಲಿ ೨೫ ಬೋರ್‌ವೆಲ್‌ಗಳನ್ನು ಮಾಡಬಹುದು. ಹೀಗೆ ಒಟ್ಟು ೫೦ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಹಣಕಾಸಿನ ತೊಂದರೆ ಇಲ್ಲ. ಆದರೂ ಅವರು ಕೆಲಸ ಮಾಡಿಲ್ಲ. ಈ ವರ್ಷದ ಆಕ್ಷನ್ ಪ್ಲಾನ್‌ನ್ನು ಜಿಲ್ಲಾ ಪರಿಷತ್ತು ಇನ್ನೂ ಕಳುಹಿಸಿಲ್ಲ. ಇದು ಅವರು ಕೆಲಸ ಮಾಡುವ ದಿಕ್ಕು. ಅವರು ಅವರ ಕರ್ತವ್ಯದಲ್ಲಿ ಸ್ಪಷ್ಟವಾಗಿ ಲೋಪ ಮಾಡಿದ್ದಾರೆ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಇದರ ಬಗ್ಗೆ ಅಲ್ಲಿನ ಚೀಫ್ ಸೆಕ್ರೆಟರಿ ಅವರಿಂದ ಎಕ್ಸ್‌ಪ್ಲೆನೇಷನ್ ಕೇಳಿದ್ದೇವೆ. ಇದು ಕರ್ತವ್ಯ ಲೋಪ ಅಲ್ಲದೆ ಬೇರೆ ಏನೂ ಅಲ್ಲ. ಈ ರೀತಿಯ ಅನುಭವಗಳು ನಮಗೆ ಬಂದಾಗ ನಾವು ಹಣ ಕೊಡುವ ಪದ್ಧತಿಯನ್ನು ಎಷ್ಟರ ಮಟ್ಟಿಗೆ ಮಾರ್ಪಾಡು ಮಾಡುವ ಅವಶ್ಯಕತೆ ಇದೆ ಕಂಡುಬರುತ್ತದೆಂದು ನಮಗನ್ನಿಸುತ್ತದೆ. ನಾವು ನೇರವಾಗಿ ಹಣ ತಾಲ್ಲೂಕು ಮಟ್ಟದಲ್ಲಿ ಕಳುಹಿಸಿದರೆ ಬಹುಶಃ ಏನಾದರೂ ಆಗಬಹುದು. ಈಗ ಏನೂ ಆಗಿಲ್ಲವೆನ್ನುವುದನ್ನು ನಾವು ಕೂಡ ಗಮನಿಸಬೇಕಾಗುತ್ತದೆ. ಅಷ್ಟು ಮಾತ್ರವಲ್ಲದೆ ಇವತ್ತು ಒಂದು ಗಂಭೀರವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು, ಅದೇನೆಂದರೆ ಟ್ರಕ್‌ಗಳಲ್ಲಿ ನೀರಿನ ಸರಬರಾಜು ಮಾಡುವಂತಹ ಪರಿಸ್ಥಿತಿ ನಮಗೆ ಬಾರದಿದೆ ಆದರೂ ಕೆಲವು ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ಹಾಕಿಲ್ಲ ಎಂದು. ಸುಮಾರು ೫೦೦ ಹಳ್ಳಿಗಳಲ್ಲಿ ಮಾತ್ರ ಕುಡಿಯುವ ನೀರಿನ ಪ್ರಾಬ್ಲಮ್ ಇದೆ ಎಂದು ನಮ್ಮ ಲೆಕ್ಕದ ಪ್ರಕಾರ ಏನು ಬರೆದುಕೊಂಡಿದ್ದಾರೆ, ಅದು ಸರಿಯಲ್ಲ. ಅದಕ್ಕಿಂತ ಹೆಚ್ಚು ಹಳ್ಳಿಗಳಲ್ಲಿ ಕುಡಿಯುವ ನೀರಿನ ಪ್ರಾಬ್ಲಮ್ ಇದೆ. ಇವಕ್ಕೆಲ್ಲಾ ತಕ್ಷಣದಲ್ಲಿ ನೇರವಾಗಿ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಅದಕ್ಕೆ ಒಂದೇ ಒಂದು ಮಾರ್ಗ, ಜಿಲ್ಲಾ

ಮಟ್ಟದಲ್ಲಿ ಒಂದು ಸಭೆಯನ್ನು ಕರೆದು, ಆ ಸಭೆಗೆ ಸಂಬಂಧಪಟ್ಟ ಎಂ.ಎಲ್.ಎ.ಗಳು ಹಾಗೂ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಮಂಡಲ ಪಂಚಾಯಿತಿ ಪ್ರಧಾನರು ಆ ಸಭೆಯಲ್ಲಿ ಭಾಗವಹಿಸಿ ಅವರವರ ತಾಲ್ಲೂಕುಗಳಲ್ಲಿ ಹೆಚ್ಚಿನ ಕಷ್ಟಗಳು ಇರತಕ್ಕಂಥ ಹಳ್ಳಿಗಳು ಯಾವುವಿವೆ ಎಂಬುದನ್ನು ಗುರುತಿಸಿ ನಾವು ನೇರವಾಗಿ ಪರಿಹಾರವನ್ನು ಆ ಹಳ್ಳಿಗಳಿಗೆ ಮುಟ್ಟಿಸುವಂಥ ಭರವಸೆ ಸರ್ಕಾರಕ್ಕಿದೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ.— ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತಿನವರು ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ೧ ಲಕ್ಷ ೪೦ ಸಾವಿರ ರೂಪಾಯಿಗಳನ್ನು ಇಂಜಿನಿಯರಿಂಗ್ ವಿಭಾಗದವರಿಗೆ ಮೇ ತಿಂಗಳಿನಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಹಣ ಸರ್ಕಾರದ ವತಿಯಿಂದ ಜಿಲ್ಲಾ ಪರಿಷತ್ತಿಗೆ ಯಾವ ತಿಂಗಳು ಬಿಡುಗಡೆ ಆಗಿತ್ತು?

ಶ್ರೀ ಎಂ. ವೈ. ಘೋರ್ಪಡೆ.— ಗುಲ್ಬರ್ಗಾ ಜಿಲ್ಲೆಗೆ ಕುಡಿಯುವ ನೀರಿಗೋಸ್ಕರ ಬಜೆಟ್‌ನಲ್ಲಿ ೨೫೫ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಆದ್ದರಿಂದ ಕುಡಿಯುವ ನೀರಿನ ಕೆಲಸಕ್ಕೆ ಹಣ ಬಿಡುಗಡೆ ಆಗದೇ ಇರತಕ್ಕಂಥ ಪ್ರಶ್ನೆಯೇ ಇಲ್ಲ. ಎಸ್ಪೆಷಲಿ ಇದಕ್ಕೆ ಹೈಯರ್ಸ್ಟ್ ಪ್ರಿಯಾರಿಟಿ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಸಹ ಈ ಮಾತನ್ನು ಒಪ್ಪಿದ್ದಾರೆ. ನಾನು ಈಗಾಗಲೇ ಪೇಳಿದ ಪ್ರಕಾರ ಆ್ಯಕ್ಷನ್ ಪ್ಲಾನ್ ೯೦-೯೧ಕ್ಕೋಸ್ಕರ ಜಿಲ್ಲಾಪರಿಷತ್ತಿನವರು ಯಾವ ರೀತಿ ಹಣ ವಿಚ್ರ್ ಮಾಡುತ್ತೇವೆನ್ನುವ ಮಾಹಿತಿಯನ್ನು ಕೊಡಬೇಕಾಗಿತ್ತೋ, ಅದನ್ನು ಇವತ್ತಿನವರೆಗೂ ಕೊಟ್ಟಿಲ್ಲ. ತಾವು ಈ ವಿಷಯವನ್ನು ಜಿಲ್ಲಾ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಬೇಕು. ಜಗಳ ಮಾಡಬೇಕು. ಆ್ಯಕ್ಷನ್ ಪ್ಲಾನ್ ಏಕೆ ತಯಾರಿಸಿಲ್ಲವೆಂದು ಕೇಳಬೇಕು. ನಾನು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಹತ್ತನೆಯ ಒಂದು ಭಾಗ ಸೇದಂ ತಾಲ್ಲೂಕಿಗೆ ಬರಬೇಕು ಆ ಕಾರಣ ಜಿಲ್ಲಾ ಪರಿಷತ್ತಿನವರು ಆ್ಯಕ್ಷನ್ ಪ್ಲಾನ್ ತಯಾರು ಮಾಡುವುದರಲ್ಲಿ ತಡವಾಗಿರುತ್ತದೆ. ಅದನ್ನು ದಯವಿಟ್ಟು ಸರಿಪಡಿಸಲಿಕ್ಕೆ ನಿಮ್ಮ ಪ್ರಭಾವವನ್ನು ಉಪಯೋಗಿಸಬೇಕೆಂದು ಅಧ್ಯಕ್ಷರ ಮೂಲಕ ಸೂಚಿಸುತ್ತಿದ್ದೇನೆ.

ಕಾರವಾರ ಜಿಲ್ಲೆಯಲ್ಲಿ ಸಿಕ್ಕಿರುವ ಆನೆ ದಂತ

೪೬೦. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಎರಡು ವರ್ಷಗಳ ಹಿಂದೆ ಕಾರವಾರ ಜಿಲ್ಲೆಯಲ್ಲಿ ೭ (ಏಳು) ಆದಿ ಉದ್ದದ ಆನೆಯ ದಂತ ಸಿಕ್ಕಿರುವುದು ನಿಜವೆ ?

೨) ಸಿಕ್ಕಿದ್ದರೆ ಅದನ್ನು ಎಲ್ಲಿ ಇಡಲಾಗಿದೆ ?

೩) ಅತ್ಯಂತ ಅಪರೂಪದ ಆನೆಯ ದಂತವನ್ನು ವಿಧಾನಸೌಧದಲ್ಲಿ ಅಲಂಕರಿಸಿ ಇಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

೧) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಎರಡು ಆನೆಯ ದಂತ ಸಿಕ್ಕಿರುವುದು ನಿಜ. ಅವುಗಳ ಉದ್ದ ೩ ರಿಂದ ೪ ಅಡಿಯಿದ್ದು, ಅವುಗಳ ತೂಕ ಒಟ್ಟು ೪೭.೪೫೦ ಕಿಲೋಗ್ರಾಂ.

೨) ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಛೇರಿಯಲ್ಲಿ ಡಲಾಗಿದೆ.

೩) ಆನೆಯನ್ನು ಕೊಂದು ದಂತವನ್ನು ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಹೊನ್ನಾವರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ವನ್ಯ ಪ್ರಾಣಿ ಸಂರಕ್ಷಣಾ ಕಾಯ್ದೆ ಪ್ರಕಾರ ಮೊಕದ್ದಮೆಯನ್ನು ಹೂಡಲಾಗಿದ್ದು ಮೊಕದ್ದಮೆಯು ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯದ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಕಾರವಾರ ಜಿಲ್ಲೆಯಲ್ಲಿ, ಪತ್ರಿಕೆಗಳಲ್ಲಿ ಬಂದ ವರದಿ ಪ್ರಕಾರ ಆರೂವರೆ ಅಡಿ, ಏಳು ಅಡಿ ಎತ್ತರ ಇರತಕ್ಕಂಥ ಆನೆ ದ ತ ಸಿಕ್ಕಿದೆಯೆಂದು ಒಂದು ಜೀಪಿನ ಪಕ್ಕದಲ್ಲಿ ನಿಲ್ಲಿಸಿ ಅದನ್ನು ಫೋಟೋ ತೆಗೆದು ಪತ್ರಿಕೆಗಳಲ್ಲಿ ಹಾಕಿದ್ದರು. ಅದನ್ನು ನಾನು ನೋಡಿದ್ದೇವೆ. ಆ ದಂತಗಳನ್ನು ವಿಧಾನ ಸೌಧದಲ್ಲಿ ಇಡಬೇಕೆಂದು ನಾವು ಪ್ರಶ್ನೆ ಮಾಡಿದ್ದೆವು. ಆದರೆ